ಪಾತ್ರೆ ಸಾಮಾನು ಇಡಲಾಗಿತ್ತು. ಒಂದೆರಡು ನಿಮಿಷದಲ್ಲೇ ಶಶಾಂಕ ತನ್ನ ನೋಟದಿಂದ ಗಂಗಾರಾಮನ ಮನೆಯ ಒಳಹೊಕ್ಕು ಬಂದ. ಏನೋ ಕೇಳಲು ಹೋಗಿದ್ದ ಶಶಾಂಕ ಮಾತು ಹೊರಳಿಸಿದ. 'ಏನು ಅಂಕಲ್, ಇಷ್ಟು ಚಿಕ್ಕ ರೂಮು ಸಾಕಾಗುತ್ತ?' ಎಂದ. ಗಂಗಾರಾಮ್ ಸಂಕೋಚದಿಂದಲೆ 'ಏನು ಮಾಡೋದು ಭಯ್ಯಾ, ನಾನು ನನ್ನ ಹೆಂಡತಿ, ಪುಟ್ಟ ಮಗು, ಚಿಕ್ಕ ಸಂಸಾರ ಹೇಗೋ ಮಾಡುತ್ತೇವೆ. ಬೆಂಗಳೂರಿನ ಬದುಕು ತುಂಬಾ ಕಷ್ಟ. ಊರಿಗೂ ಹೋಗುವ ಹಾಗಿಲ್ಲ... ಹೆಂಡತಿ ಆಗಾಗ ಜಗಳಾಡುತ್ತಾಳೆ...' ಎಂದು ತನ್ನ ಸಂಕಟ ತೋಡಿಕೊಂಡಿದ್ದ.

ಹೀಗೆ ಗಂಗಾರಾಮ್ ಜೊತೆಗೆ ಮಾತು ಬಂದ ಅನೇಕ ಸಂದರ್ಭದ ನಂತರ, ಶಶಾಂಕಗೆ ತನ್ನ ಮನೆ ಕಣ್ಣ ಮುಂದೆ ಬರುತ್ತಿತ್ತು. ಡಬಲ್ ಬೆಡ್ ರೂಮು, ಕಿಚನ್, ಹಾಲ್... ಎಲ್ಲವೂ ವಿಶಾಲವಾಗಿ ಇದ್ದರೂ ಅಮ್ಮ ಬಂದಾಗ, 'ಇನ್ನೊಂದು ರೂಮು ಬೇಕಪ್ಪ... ಯಾರಾದರೂ ಮನೆಗೆ ಬಂದರೆ...' ಎಂದು ಕೂಗಾಡುವುದು ನೆನಪಾಗುತ್ತಿತ್ತು. 'ಅಂಕಲ್ ನಾವು ಹೊರಗಡೆ ಹೋಗುತ್ತಿದ್ದೇವೆ... ಒಂದು ಕೊರಿಯರ್ ಬರೋದಿದೆ. ಬಂದರೆ ತಗೊಂಡು ಇಟ್ಟುಕೊಳ್ಳಿ...' ಎಂದು ಹೇಳಲು ಬಂದೆ ಎಂದು ಮತ್ತೆ ಲಿಫ್ಟ್ ಹತ್ತಿ ಮನೆ ಸೇರಿದ್ದ ಶಶಾಂಕ.

***

ಗಂಗಾರಾಮ್‌ನ ಕೋಣೆ ನೋಡಿದಾಗಿಂದ ಶಶಾಂಕಗೆ ಸರಿಯಾಗಿ ನಿದ್ದೆ ಬರುತ್ತಿಲ್ಲ. ಅದೆಂತಹ ಜೀವನ ಗಂಗಾರಾಮ್‌ನದು... ಶಶಾಂಕಗೆ ತಿಂಗಳಿಗೆ ಒಂದು ಲಕ್ಷ ಸಂಬಳ, ಹೆಂಡತಿ ಶ್ರುತಿಗೆ ಅರ್ಧ ಲಕ್ಷ ತಿಂಗಳ ಸಂಬಳ. ಯಾವ ರೀತಿಯಿಂದಲೂ ಹಣದ ಕೊರತೆ ಇರಲಿಲ್ಲ. ಇಬ್ಬರ ಒಂದೂವರೆ ಲಕ್ಷ ಸಂಬಳದಲ್ಲಿ ತಿಂಗಳ ಕಿರಾಣಿ, ಕಾರಿನ ಪೆಟ್ರೋಲ್, ಅಪಾರ್ಟ್‌ಮೆಂಟ್ ಮನೆಯ ಮೆಂಟೆನೆನ್ಸ್ ಖರ್ಚು, ವೀಕ್‌ಎಂಡ್ ಹೋಟೆಲ್ ಊಟ, ತಿರುಗಾಟ, ಸಿನಿಮಾ, ಇತ್ಯಾದಿ ಎಲ್ಲ ಸೇರಿ ಐವತ್ತು ಸಾವಿರ ಖರ್ಚಾಗುತ್ತಿತ್ತು. ಉಳಿದಂತೆ ಒಂದು ಲಕ್ಷದ ಹಣದಲ್ಲಿ ಶಶಾಂಕ ಮತ್ತು ಶ್ರುತಿ ಅಲ್ಲಲ್ಲಿ ಹಣ ತೊಡಗಿಸಿದ್ದರು. ಬೆಂಗಳೂರಲ್ಲೇ ಒಂದು ಮನೆ ಕೊಂಡುಕೊಳ್ಳುವ ವಿಚಾರದಲ್ಲಿಯೂ ಅವರಿದ್ದರು. ಗಂಗಾರಾಮ್‌ನ ಒಟ್ಟು ಕೋಣೆ ಶಶಾಂಕನ ಅಡುಗೆ ಮನೆಯಷ್ಟೂ ದೊಡ್ಡದಲ್ಲ! ಅಷ್ಟರಲ್ಲೆ ಬದುಕು... ಅವನ ಹೆಂಡತಿಯಾದರೋ ಇಂತಹ ವಾತಾವರಣವನ್ನು ಹೇಗೆ ಸಹಿಸಿದ್ದಾಳೊ ಎನಿಸಿತು ಶಶಾಂಕನಿಗೆ. ಇಷ್ಟು ದೊಡ್ಡ ಮನೆ, ಸಂಬಳ, ಮನೆ ಕೆಲಸದವರು, ಎಲ್ಲ ಇದ್ದರೂ ಯಾವುದೋ ಕೊರತೆ ನಮ್ಮನ್ನು ಕಾಡುತಿದೆ ಎನಿಸಿತು ಅವನಿಗೆ.

ಇಂತಹ ಹತ್ತಾರು ವಿಚಾರಗಳಲ್ಲೆ ದಿನಗಳನ್ನು ಕಳೆದು ಆ ಅಪಾರ್ಟ್‌ಮೆಂಟಿಗೆ ಬಂದು ಶಶಾಂಕ ಮತ್ತು ಶ್ರುತಿಗೆ ಆರು ತಿಂಗಳು ಕಳೆದಾಗಿತ್ತು. ಆರು ತಿಂಗಳು ಹೇಗೆ ಸರಿದು ಹೋದುದೆಂದು ಶಶಾಂಕನಿಗೆ ಗೊತ್ತಾಗಲಿಲ್ಲ. ಅಪಾರ್ಟ್‌ಮೆಂಟಿನಲ್ಲಿ ಯಾವುದೇ ತೊಂದರೆ ಇರಲಿಲ್ಲ. ಎಲ್ಲರೂ ತಮ್ಮಷ್ಟಕ್ಕೆ ತಾವು ಬದುಕು ನಡೆಸುವವರೆ! ಯಾವ ನಂಬರಿನ ಫ್ಲಾಟ್‌ನಲ್ಲಿ ಯಾರಿದ್ದಾರೆ



ತಿಳಿಯದು, ಆದರೆ ಎಲ್ಲರೂ ಅನೂಕೂಲಸ್ಥರೆ... ಹೀಗೆಂದಾಗ ಅವನಿಗೆ ಮೊದಲು ನೆನಪಾಗುವುದು ಗಂಗಾರಾಮ್ ಕುಟುಂಬ. ಅಂತಹ ಪರಿಸ್ಥಿತಿಯಲ್ಲಿ ಬದುಕುವುದು ಯಾರಿಗಾದರೂ ಕಷ್ಟವೆ... ಶಶಾಂಕ ಚಿಕ್ಕವನಾಗಿದ್ದಾಗ ಕಷ್ಟದಲ್ಲಿ ಒಂದೆ ಕೋಣೆ ಅಲ್ಲದಿದ್ದರೂ ಸಣ್ಣ ಮನೆಯಲ್ಲಿ ಅಪ್ಪ–ಅಮ್ಮ, ಅಣ್ಣ ಮತ್ತು ಅಕ್ಕ–ತಂಗಿಯರೊಂದಿಗೆ ಬದುಕುತ್ತಿದ್ದುದು ನೆನಪಾಯಿತು. ಹೀಗೆ ಏನೇನೋ ಯೋಚಿಸುತ್ತಾ ತಲೆಕೆಟ್ಟಂತಾಗಿ... ಅವರವರ ಹಣೆಬರಹ ಎಂದು ಹಾಗೆ ಯೋಚಿಸುತ್ತಲೇ ಅದೆಷ್ಟೋ ಸಾರಿ ಅವನು ಕೆಳಗೆ ಬಂದು ಮೇಲೆ ತನ್ನ ಮನೆ ಸೇರುವಾಗ ಇಂತಹವೆ ವಿಷಯಗಳನ್ನು ಯೋಚಿಸುತ್ತಲೆ ವಾಪಸ್ ಹೋಗುತ್ತಿದ್ದ.

***

ಅಂದಿನ ಶನಿವಾರದ ಬೆಳಗು ಯಾಕೋ ಶಶಾಂಕನಿಗೆ ಹಿತವೆನಿಸುತ್ತಿಲ್ಲ... ರಾತ್ರಿ ತಡವಾಗಿ ಮಲಗಿದ್ದರು. ಅಲ್ಲದೆ ಹೊಸ ಅಪಾರ್ಟ್‌ಮೆಂಟಿಗೆ ಬಂದು ಆರು ತಿಂಗಳಾಗಿದ್ದರೂ ಒಂದಲ್ಲ ಒಂದು ಏನೇನೋ ಕೆಲಸಗಳಿದ್ದ ಕಾರಣ... ಶ್ರುತಿ ಶುಕ್ರವಾರದ ರಾತ್ರಿಯೇ 'ನಾಳೆ ಎಲ್ಲಿಯೂ ಹೊರಗಡೆ ಹೋಗುವುದು ಬೇಡ ಶಶಾಂಕ... ತುಂಬಾ ಕೆಲಸಗಳಿಗೆ ಅಲ್ಲದೆ ಮುಂದಿನ ವಾರವೆ ಅಪ್ಪ–ಅಮ್ಮ ಬರ್ತೀವಿ ಅಂದಿದ್ದಾರೆ' ಎಂದು ಹೇಳಿದ್ದರಿಂದ ಶಶಾಂಕನೂ ಒಂದಷ್ಟು ತಡವಾಗೆ ಎದ್ದು ಮನೆ ಸ್ವಚ್ಛಗೊಳಿಸಲು ಶ್ರುತಿಗೆ ನೆರವಾಗಿದ್ದ. ಶಶಾಂಕನಿಗೆ ಸಲೂನಿಗೆ ಹೋಗಬೇಕಿತ್ತು... ಶ್ರುತಿಗೆ ಅರ್ಧಗಂಟೆ ಹೋಗಿಬರುವುದಾಗಿ ಹೇಳಿ ಲಿಫ್ಟ್ ಮೂಲಕ ಗ್ರೌಂಡ್ ಫ್ಲೋರ್‌ಗೆ ಬಂದ.

ಶಶಾಂಕಗೆ, ಎಂದಿನಂತೆ ಕೆಳಗಡೆ ಬಂದ ನಂತರ ಮೊದಲು ಕಾಣುತ್ತಿದ್ದುದು ಗಂಗಾರಾಮ್‌ನ ಮುಖದರ್ಶನ. ಕಾರಣ ಅವನು ತನ್ನ ಕೋಣೆಯ ಮುಂದೆಯೆ ಒಂದು ಕುರ್ಚಿ ಹಾಕಿ ರಿಜಿಸ್ಟರ್ ಇಟ್ಟುಕೊಂಡು ಕೂತಿರುತ್ತಿದ್ದ. ಆದರೆ ಇವತ್ತು ಕಾಣಲಿಲ್ಲ. ಅಲ್ಲದೆ ಅವನ ಕೋಣೆಗೆ ಬೀಗ ಬೇರೆ ಹಾಕಲಾಗಿತ್ತು. ಅಷ್ಟರಲ್ಲೇ ಹೊರಗಡೆ ಹೋಗಿದ್ದ ಶಶಾಂಕನ ಗೆಳೆಯ, ಎದುರು ಫ್ಲಾಟ್‌ನ ವಿಕ್ರಂ ಬಂದಿದ್ದ. ಇಬ್ಬರು ಮುಖಾಮುಖಿಯಾಗುತ್ತಿದ್ದಂತೆಯೇ ಮೊದಲು ವಿಚಾರಿಸಿದ್ದು ಗಂಗಾರಾಮ್ ಮತ್ತು ಅವನ ಕುಟುಂಬದ ಕುರಿತು.

ವಿಕ್ರಂನ ಪ್ರಕಾರ ಕಳೆದ ಎರಡು ತಿಂಗಳಿಂದ ಗಂಗಾರಾಮ್ ಮತ್ತು ಅವನ ಹೆಂಡತಿ ಚಂಪಾದೇವಿ ಯಾವುದೋ ಕಾರಣಕ್ಕೆ ಜಗಳಾಡುತ್ತಿದ್ದರಂತೆ. ಇದೇ ಹಿನ್ನೆಲೆಯಲ್ಲಿ ಗಂಗಾರಾಮ್ ಅಣ್ಣ ಬೆಂಗಳೂರಿನಲ್ಲಿರುವ ಚಾಂದರಾಮ್ ಹಾಗೂ ಅತ್ತಿಗೆ ರೂಪಾದೇವಿ ಒಂದೆರಡು ಸಾರಿ ಬಂದು ಹೋಗಿದ್ದರಂತೆ.

'ಅದೆಲ್ಲವೂ ಸರಿ, ಆದರೆ ಈ ಗಂಗಾರಾಮ್ ಈಗ ಎಲ್ಲಿ ಹೋದ?' ಎಂದು ವಿಕ್ರಂನನ್ನು ಕೇಳಿದ ಶಶಾಂಕ. ವಿಕ್ರಂಗೂ ಅದು ಸದ್ಯಕ್ಕೆ ತಿಳಿಯದು.

ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ವಿಕ್ರಂ, ಶಶಾಂಕನ ಫ್ಲಾಟಿನ ಕಾಲಿಂಗ್ ಬೆಲ್ ಒತ್ತಿದ... ಬಾಗಿಲು ತೆಗೆದಾಗ ವಿಕ್ರಂ ಮುಖದಲ್ಲಿ ಯಾವುದೋ ಒಂದು ಆತಂಕದ ಸುದ್ದಿ ತಗೊಂಡು ಬಂದಂತೆ ಕಾಣುತ್ತಿತ್ತು. ಶಶಾಂಕಗೆ ಯಾಕೋ ಎದೆಯಲ್ಲಿ ಢವಢವ ಶುರುವಾಗಿತ್ತು. ಅದೇಕೆ ಹಾಗಾಗಲು ಶುರುವಾಯಿತೊ ತಿಳಿಯದು.

'ಏನಾಯಿತು ವಿಕ್ರಂ... ಗಂಗಾರಾಮ್ ಕುರಿತು ಏನಾದರೂ ಸುದ್ದಿ...?' ಎನ್ನುತ್ತಲೇ, 'ಅದೇ... ಗೊತ್ತಾಯಿತು... ಹೇಳೋಣಾಂತ ಬಂದೆ!' ಎಂದ ವಿಕ್ರಂ.

ಶಶಾಂಕಗೆ ಕುತೂಹಲ ತಡೆಯಲಾಗಲಿಲ್ಲ. 'ಏನಾಯ್ತು? ಎಲ್ಲಿದ್ದಾನೆ ಗಂಗಾರಾಮ್?' ಎಂದು ಒಂದೇ ಉಸಿರಿನಲ್ಲಿ ಕೇಳಿದ. ವಿಕ್ರಂ ಮೆಲ್ಲಗೆ ಉತ್ತರಿಸಿದ – 'ಕೆ.ಆರ್. ಪುರಂ ಪೊಲೀಸ್ ಸ್ಟೇಶನ್‌ನಲ್ಲಿ! ಹೆಂಡತಿ ವಿರುದ್ಧ ಪೊಲೀಸ್ ಕೇಸ್ ಮಾಡಲು ಹೋಗಿದ್ದನಂತೆ... ಗಂಗಾರಾಮ್‌ಗೆ ಅನುಮಾನವಿತ್ತಂತೆ... ಬೆಳಗಿನ ಜಾವದಿಂದಲೇ ಹೆಂಡತಿ ಮಗುವನ್ನು ಬಿಟ್ಟು ಮನೆಯಿಂದ ಹೊರಟು ಹೋಗಿರುವುದನ್ನು ಅನುಮಾನಿಸಿ, ಅವನು ತನ್ನ ಪರಿಚಯದ ನಾಲ್ಕೈದು ಮನೆಗೆ ಮತ್ತು ಅಣ್ಣನ ಮನೆಗೆ ಫೋನ್ ಮಾಡಿದ್ದಾನಂತೆ... ಎಲ್ಲೂ ಹೆಂಡತಿ ಪತ್ತೆಯಾಗದಿದ್ದಾಗ ಅನುಮಾನ ಬಂದು ಪೊಲೀಸ್ ಸ್ಟೇಷನ್ನಿಗೆ ದೂರು ಕೊಡಲು ಹೋಗಿದ್ದಾನಂತೆ... ಪೊಲೀಸರು, ನಿಮಗೆ ಯಾರ ಮೇಲಾದರೂ ಅನುಮಾನ ಇದೆಯಾ? ಎಂದು ಕೇಳಿದಾಗ, ಗಂಗಾರಾಮ್ ಪೊಲೀಸರಿಗೆ ಹೇಳಿದ್ದರ ಪ್ರಕಾರ, ಚಂಪಾದೇವಿಗೆ ಆದಿತ್ಯ ಅಪಾರ್ಟ್‌ಮೆಂಟಿನ ಪಕ್ಕದ ಅಪಾರ್ಟ್‌ಮೆಂಟಿನಲ್ಲಿನ ಹುಡುಗನೊಬ್ಬನ ಜೊತೆ ಗೆಳೆತನವಿತ್ತಂತೆ... ಬಹುಶಃ ಅವನ ಜೊತೆಗೆ ಚಂಪಾದೇವಿ ಮಗುವನ್ನು ಬಿಟ್ಟು ಓಡಿಹೋಗಿರಬಹುದು... ಅದನ್ನೇ ಮುಂದಿಟ್ಟು ಗಂಗಾರಾಮ್ ದೂರು ನೀಡಿದ್ದಾನಂತೆ' ಎಂದು ವಿವರಗಳನ್ನಿತ್ತ. ಈಗ ಗಾಬರಿಯಾಗುವ ಸರದಿ ಶಶಾಂಕ ಮತ್ತು ಅವನ ಹೆಂಡತಿ ಶ್ರುತಿಯದಾಗಿತ್ತು!

ಶಶಾಂಕನಿಗೆ ಗಂಗಾರಾಮ್, ಅವನ ಹೆಂಡತಿ ಚಂಪಾದೇವಿ ಹಾಗೂ ಅವನ ಮಗ ಬಬ್ಲೂನ ಚಿತ್ರಗಳ ಜೊತೆ ಜೊತೆಗೆ ಆದಿತ್ಯ ಅಪಾರ್ಟ್‌ಮೆಂಟಿನ ಗ್ರೌಂಡ್ ಫ್ಲೋರಿನಲ್ಲಿರುವ ಗಂಗಾರಾಮ್‌ನ ಆ ಒಂದಂಕಣದ ಮನೆಯೇ ಕಣ್ಣ ಮುಂದೆ ಮತ್ತೆ ಮತ್ತೆ ಬಂದು ನಿಲ್ಲಲು ಶುರುವಾಗಿತ್ತು...

ಪ್ರತಿಕ್ರಿಯಿಸಿ: feedback@sudha.co.in